# ಎನ್.ಎಸ್.ಎಸ್ ದಿನಾಚರಣೆಯ ವರದಿ

ದಿನಾಂಕ24-09-2019 ರ ಮಂಗಳವಾರದಂದು ಶಾಂತಿ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಸಭಾಗಂಣದಲ್ಲಿ ಎನ್.ಎಸ್.ಎಸ್.ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು.ಈ ಕಾರ್ಯಕ್ರಮದಲ್ಲಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ 2 ಘಟಕಗಳಿದ್ದು, ಸುಮಾರು 120 ಸ್ವಯಂಸೇವಕರು ಭಾಗವಹಿಸಿದ್ದರು.ಈ ಕಾರ್ಯಕ್ರಮವನ್ನು ಸ್ವಯಂ ಸೇವಕಿಯರಾದ **ನಿಸರ್ಗ** ತಂಡದವರಿಂದ ರಾ.ಸೇ.ಯೋ ಗೀತೆಯನ್ನು ಹಾಡುವುದರ ಮೂಲಕ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಂತಿ ಪದವಿಕಾಲೇಜಿನ ಪ್ರಾಂಶುಪಾಲರಾದ **ಪ್ರೊ.ಸಿ ನಾಗರಾಜುರವರು** ವಹಿಸಿದ್ದರು.ಈ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಹಿರಿಯ ಸ್ವಯಂಸೇವಕರಾದ ಹಾಗೂ ಶಾಂತಿ ಕಾಲೇಜು ರಾ.ಸೇ.ಯೋ ನ **ರಾಜ್ಯಪ್ರಶಸ್ತಿ ವಿಜೇತ ಘಟಕದ** ಸ್ವಯಂ ಸೇವಕರಾಗಿದ್ದ **ಜಯಚಂದ್ರರವರು** ಸ್ವಯಂ ಸೇವಕರ ನಡವಳಿಕೆಗಳು ಮಾದರಿಯಾಗಿರಬೇಕು ಹಾಗು ರಾ.ಸೇ.ಯೋ ನ ಘನತೆಯನ್ನು ಮನದಟ್ಟು ಮಾಡಿದರು.ಇದೇ ಸಮಯದಲ್ಲಿ ಉಪಸ್ಥಿತರಿದ್ದ ಮತ್ತೊಬ್ಬ ಸ್ವಯಂಸೇವಕರಾದ **ಪ್ರಕಾಶ್** ರವರು ರಾ.ಸೇ.ಯೋ ನಿಂದ ವ್ಯಕ್ತಿತ್ವ ವಿಕಸನ ಹಾಗು ನಡವಳಿಕೆಯ ಬದಲಾವಣೆ ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಂತಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ, ಸಿ ನಾಗರಾಜುರವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜಿವನದಲ್ಲಿ ಸಾಧನೆ ಮಾಡಬೇಕಾದರೆ ರಾ.ಸೇ.ಯೋ ನ ಸದಸ್ಯರಾಗಿ ಎಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಆಹ್ವಾನಿತರಿಗೆ ವಂದನಾರ್ಪಣೆ ಸಲ್ಲಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಕ್ತಾಯ ಮಾಡಲಾಯಿತು.

---***---

ಪ್ರಾಂಶುಪಾಲರು
ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇ
ಮಳವಳ್ಳಿ - 571 430.

Scanned by CamScanner









Scanned by CamScanner









Scanned by CamScanner